# ಪ್ರಮಾಣ ಮುರಿದ ನಿರ್ಮಾಪಕರ ಪ್ರಶಸ್ತಿ ಯೋಚನೆ

ಬಿಳಿ ಅಂಗಿ, ಬಿಳಿ ಪ್ಯಾಂಟು, ಬಿಳಿ ಚಪ್ಪಲಿ ಎಂದರೆ ಅವರಿಗಿಷ್ಟ. ದೈವಭಕ್ತರಾದ್ದರಿಂದ ಹಣೆಮೇಲೆ ಕುಂಕುಮ ಭೂಷಣ. ಹೆಗಲ ಮೇಲೊಂದು ಸಣ್ಣ ಚೌಕ ಹಾಕಿಕೊಂಡಿರುತ್ತಾರೆ. ಆಗೀಗ ಮುಖ ಒರೆಸಿಕೊಳ್ಳುವುದು ಅಭ್ಯಾಸ. ಬಲಗೈಯಲ್ಲಿ ಕಪ್ಪ. ಬೆರಳುಗಳನ್ನು ತರಹೇವಾರಿ ಕಲ್ಲುಗಳ ಉಂಗುರಗಳು ಅಲಂಕರಿಸಿವೆ. ವೇದಿಕೆ ಸಿಕ್ಕರೆ ಅವರು ಭಾಷಣ ಭಯಂಕರ. ವಾಕ್ಯರಚನೆ, ಪದಗಳ ಯಥೋಚಿತ ಬಳಕೆಯ ಅರಿವು ಅವರಿಗಿಲ್ಲವಾದ್ದರಿಂದ ಅರ್ಥ, ತಾತ್ಪರ್ಯ ಹುಡುಕುವುದು ಕಷ್ಟವೇ. ತಮ್ಮ ಬಗ್ಗೆ ತಾವೇ ನಿಸ್ಸಂಕೋಚವಾಗಿ ಹೇಳಿಕೊಳ್ಳಬಲ್ಲ ವ್ಯಕ್ತಿತ್ವ. ತಮ್ಮನ್ನು ತಾವೇ ತತ್ವಜ್ಞಾನಿಯೆಂದೂ ಅವರು ಭಾವಿಸಿದ್ದಾರೆ. ಯಾಕೆಂದರೆ, ಸಿಕ್ಕಸಿಕ್ಕಲ್ಲಿ ಅವರು ಬರೆದಿರುವ ಒಂದು ಅಧ್ಯಾತ್ಮ ಸಂಬಂಧಿ ಪುಸ್ತಕವನ್ನು ಹಂಚುವ ಅಭ್ಯಾಸ ಇಟ್ಟುಕೊಂಡಿದ್ದಾರೆ. ಅದು ಎಷ್ಟು ಪ್ರತಿಗಳು ಮುದ್ರಿತವಾಗಿವೆ ಎಂಬ ಲೆಕ್ಕ ಸದಾ ಬಾಯಲ್ಲಿರುತ್ತದೆ.

ಪ್ರಸಕ್ತ ರಾಜಕೀಯ ವಿದ್ಯಮಾನ, ಆಡಿಯೊ ಮಾರುಕಟ್ಟೆ, ನಾಯಕರ ಸಂಭಾವನೆ ಪಟ್ಟಿ, ಕ್ಲಿಕ್ ಆಗಬಲ್ಲ ಸಿನಿಮಾ, ತಲೆಕೆಳಗಾಗುವ ಲೆಕ್ಕಾಚಾರ ಎಲ್ಲಾ ವಿಷಯಗಳ ಬಗ್ಗೆ ಅವರು ಓತಪ್ರೋತವಾಗಿ ಗಂಟೆಗಟ್ಟಲೆ ಮಾತನಾಡಬಲ್ಲರು. ಆದರೆ, ಖುದ್ದು ಅವರದ್ದೇ ಉದಾಹರಣೆ ಕೊಡುವಾಗ ಮಾತ್ರ ಆಗೀಗ ತಲೆ ಕೆರೆದುಕೊಳ್ಳುವುದುಂಟು.

ವರ್ಷಗಳ ಹಿಂದೆ ಸಣ್ಣ ಪತ್ರಿಕೆಯ ಸಂಪಾದಕರೊಬ್ಬರನ್ನು ನೆಚ್ಚಿಕೊಂಡು ಒಂದು ಸಿನಿಮಾ ಮೇಲೆ ದುಡ್ಡು ಹಾಕಿದರು. ಅದು ಅವರ ನಿರ್ಮಾಣದ ಮೊದಲ ಕೆಟ್ಟ ಚಿತ್ರ. ಆ ಸಿನಿಮಾ ಮಕಾಡೆಯಾದದ್ದೇ ಒಂದು ಸುದ್ದಿಗೋಷ್ಠಿ ನಡೆಸಿ, ಚಿತ್ರತಂಡದ ಎಲ್ಲರಿಗೂ ಫಲಕಗಳನ್ನು ಹಂಚಿ, ‘ಇನ್ನು ಸಿನಿಮಾ ಸಹವಾಸಕ್ಕೆ ನಮ್ಮಪ್ಪನಾಣೆಗೂ ಬರುವುದಿಲ್ಲ’ ಎಂದು ಪ್ರಮಾಣ ಮಾಡಿಬಿಟ್ಟರು. ಆ ಪ್ರಮಾಣವನ್ನು ಅವರೇ ಕೆಲವು ವರ್ಷಗಳ ನಂತರ ಮುರಿದರು. ಅದಕ್ಕೆ ಅಭಿಮಾನಿಗಳ ಒತ್ತಡವೇ ಕಾರಣ ಎಂದು ಪುಗ್ಗ ಹಾರಿಸಿದರು. ಇನ್ನೊಂದು ಸಿನಿಮಾ ನಿರ್ಮಾಣದಲ್ಲಿ ಪಾಲುದಾರರಾದರು. ಕೊನೆಯುಸಿರೆಳೆಯುವ ಸ್ಥಿತಿಯಲ್ಲಿದ್ದ ಆಡಿಯೋ ಕಂಪೆನಿಯೊಂದನ್ನು ಬದುಕಿಸಿ ಅದನ್ನೂ ತಮ್ಮ ಸಮಾಜ ಸೇವೆಗಳ ಪಟ್ಟಿಗೆ ಸೇರಿಸಿಕೊಂಡರು. ಜನಪ್ರಿಯ ನಟರೊಬ್ಬರ ನೂರನೇ ಚಿತ್ರದ ವಿತರಣೆ ಹಕ್ಕನ್ನು ಬಿ.ಕೆ.ಟಿ (ಬೆಂಗಳೂರು, ಕೋಲಾರ, ತುಮಕೂರು) ಪ್ರದೇಶಗಳಿಗೆ ಕೋಟಿಗಟ್ಟಲೆ ಸುರಿದು ಕೊಂಡುಕೊಂಡರು. ಆ ಚಿತ್ರದ ಆಡಿಯೋ ಬಿಡುಗಡೆ ಸಮಾರಂಭದಲ್ಲಿ ತಮ್ಮ ಬಳಗದ ಸ್ವಯಂ ಸೇವಕರಿಗೆ ಲೈಫ್ ಸೈಜ್ ಟಿ–ಶರ್ಟ್‌ಗಳನ್ನು ಕೊಟ್ಟರು. ಟಿ–ಶರ್ಟ್ ತೊಟ್ಟ ಕೆಲವು ಸ್ವಯಂ ಸೇವಕರು ಗೊಣಗಿದರು. ಯಾಕೆಂದರೆ, ಕೆಲವರ ಟಿ–ಶರ್ಟ್‌ಗಳು ಅದಾಗಲೇ ತೂತುಬಿದ್ದಿದ್ದವು. ಭಾಷಣ ಭಯಂಕರರ ಸಾಹಸ ಅಂದಮೇಲೆ ಗೊಣಗುವುದಷ್ಟೆ, ತಗಾದೆ ತೆಗೆಯುವ ಹಾಗಿಲ್ಲ. ಎಲ್ಲರೂ ತೂತು ಟಿ–ಶರ್ಟ್‌ಗಳನ್ನೇ ಹಾಕಿಕೊಂಡು ಪ್ರಚಾರ ಮಾಡಿದರು. ಆ ಸಿನಿಮಾ ವಿತರಣೆಯಿಂದಲೂ ಬರಕತ್ತಾಗಲಿಲ್ಲ.

ಹೇಳಿಕೇಳಿ ತತ್ವಜ್ಞಾನಿಯಾದ ಅವರಿಗೆ ಸರಿಕಾಲದಲ್ಲಿ ಬ್ರಿಜ್ ಸಿನಿಮಾ ನಿರ್ಮಿಸುವ ಯೋಚನೆ ಮೂಡಿತು. ಆ ಚಿತ್ರವನ್ನು ಐವತ್ತು ದಿನ ಓಡಿಸಿದ ಸಂತೃಪ್ತಿ ಈಗ ಅವರದ್ದು. ಅದಕ್ಕೊಂದು ಪ್ರಶಸ್ತಿ ಸದ್ಯದ ನಿರೀಕ್ಷೆ.

–ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68